ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಅಧ್ಯಕ್ಷರ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಸ್. ಬಂಗಾರಪ್ಪ.—(ಸದಸ್ಯರು ಹಾಜರಿರಲಿಲ್ಲ)

ಶ್ರೀ ಎಫ್. ಎ. ಕೊಪ್ಪದ್.—ನಮ್ಮಲ್ಲಿ ನೀರಿನ ತಾಪತ್ರಯ ಬಹಳ ಇದೆ. ೪–೫ ಹಳ್ಳಿಗಳಿಗೆ ನೀರಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ತಾಲ್ಲೂಕು ಕಚೇರಿಗಳಲ್ಲಿ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ಆಂದಾಗ ಇದಕ್ಕೆ ಹಣ ಕೊಡುವವರು ಯಾರು ? ಇವತ್ತು ಆಲ್ಲಿ ೪–೫ ಮೈಲಿ ದೂರದಿಂದ ನೀರು ಹೊತ್ತು ತರತಕ್ಕ ಪರಿಸ್ಥಿತಿ ಇದೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಬರಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಇವತ್ತು ಅವರ ಬೇಡಿಕೆ ಮೇಲೆ ಚರ್ಚೆ ಇದೆ. ಆಗ ಅವರೇ ಇರುತ್ತಾರೆ, ಆಗ ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಅಧ್ಯಕ್ಷರು.—ಆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಆಗ ಹೇಳಿ.

(vii) ಗುಳೇದಗುಡ್ಡಕ್ಕೆ ನವಿಲು ತೀರ್ಥದಿಂದ ನೀರು ಪೂರೈಕೆ ಮಾಡುವ ಬಗ್ಗೆ

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಿಯಮಾವಳಿ ೩೫ರ ಪ್ರಕಾರ.....

ಅಧ್ಯಕ್ಷರು.—ಇವತ್ತು ಅದರ ಮೇಲೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೀರಿ. ಮತ್ತೆ ನಿಯಮ ೩೫ರಲ್ಲಿ ಎತ್ತುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಎರಡು ದಿನದಿಂದ ವಿಷಯ ಸಭೆಯ ಮುಂದೆ ಬರಲಿಲ್ಲ. ನಮ್ಮಲ್ಲಿ ನೀರಿನ ಪೂರೈಕೆ ಸರಿಯಾಗಿ ಆಗುತ್ತಿಲ್ಲ. ಅದಕ್ಕೋಸ್ಕರ ರೂಲ್ ೩೫ರ ಪ್ರಕಾರ ಕಳುಹಿಸಿದ್ದೇನೆ.

ಅಧ್ಯಕ್ಷರು.—ಇವತ್ತು ಅದೇ ಬೇಡಿಕೆಮೇಲೆ ಚರ್ಚೆ ಇದೆ. ಆಗ ವಿಷಯವನ್ನು ಪ್ರಸ್ತಾಪ ಮಾಡಿ ಮಂತ್ರಿಗಳಿಗೆ ವಿಷಯ ತಿಳಿಸಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನೀರಿಲ್ಲ ಎಂದು ಪರದಾಡುವಾಗ ಏನು ಮಾಡಲಿಕ್ಕೆ ಬರುತ್ತದೆ. ಆಲ್ಲಿ ೬೦ ಸಾವಿರ ಜನಸಂಖ್ಯೆ ಇದೆ.

ಅಧ್ಯಕ್ಷರು.—ರೂಲ್ ೩೫ರಲ್ಲಿ ವಿಷಯ ಎತ್ತಿದರೆ ನೀರು ಬರುತ್ತದೆಯೆ ?

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಿನ್ನೆ ರೂಲ್ ೭೨ರ ಪ್ರಕಾರ ಕಳುಹಿಸಿದ್ದೆ, ಆಗಲೂ ಚರ್ಚೆಗೆ ಬರಲಿಲ್ಲ.

ಶ್ರೀ ವಿ. ಧನಂಜಯ ಕುಮಾರ್.—ಸಂಬಂಧಪಟ್ಟ ಮಂತ್ರಿಗಳನ್ನು ನೋಡಿ ರೆ ಅವರ ಕೆಲಸ ಆಗುತ್ತದೆ.

ಅಧ್ಯಕ್ಷರು.—ರೂಲ್ ೭೨ ರಲ್ಲಿ ಕೊಟ್ಟರೆ ಹಾಕಿದ್ದೇವೆ. ಮಂತ್ರಿಗಳು ಉತ್ತರಿಸುತ್ತಾರೆ ಬಿಡಿ.

ಶ್ರೀ ವಿ. ಧನಂಜಯ ಕುಮಾರ್.—ಇದು ಗ್ರಾಮಾಭಿವೃದ್ಧಿ ಸಚಿವರಿಗೆ ಸಂಬಂಧಿಸಿದ್ದಲ್ಲ ನಗರಾಭಿವೃದ್ಧಿ ಸಚಿವರಿಗೆ ಸಂಬಂಧಿಸಿದ್ದು.

ಅಧ್ಯಕ್ಷರು.—ನಿಮ್ಮ ನೋಟೀಸ್ ಓದಿಬಿಡಿ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಓದುತ್ತೇನೆ. ಗುಳೇದಗುಡ್ಡಕ್ಕೆ ನಳದ ನೀರು ಪೂರೈಕೆಯು ಆಸಂಗಿ ಗ್ರಾಮದ ಹತ್ತಿರ ಹರಿದು ಬರುತ್ತಿರುವ ಮಲಪ್ರಭಾ ನದಿಯಿಂದ ಇದ್ದು ಈಗ ನದಿಯಲ್ಲಿ ನೀರು ಕಡಿಮೆಯಾಗಿ ೩೦ ಸಾವಿರ ಜನ ವಸತಿಯಾದ ಗುಳೇದಗುಡ್ಡ ನಗರಕ್ಕೆ ನೀರಿನ ಪೂರೈಕೆಯು ಕಡಿಮೆ ಆಗುತ್ತದೆ. ಆದ್ದರಿಂದ ನವಿಲು ತೀರ್ಥದಲ್ಲಿ ಶೇಖರಿಸಲ್ಪಟ್ಟ ನೀರನ್ನು ಕೂಡಲೇ ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಮಲಪ್ರಭಾ ನದಿಗೆ ಹೆಚ್ಚಿಗೆ ನೀರು ಬಿಡಬೇಕೆಂದು ಗುಳೇದಗುಡ್ಡ ಜನತೆಗೆ ಆಗುತ್ತಿರುವ ಈ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನಾವು ಸಾರ್ವಜನಿಕ ಮಹತ್ವದ ವಿಷಯವಾಗಿ ಕ್ರಿಯಾಲೋಪವಲ್ಲದ ಈ ವಿಚಾರವಾಗಿ ನಾವು ಸರ್ಕಾರದ ಗಮನ ಸೆಳೆಯುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಳ್ಳಿಗಳ ಬಗ್ಗೆಯೂ ಅವರು ಹೇಳಿದ್ದಾರೆ.

ಅಧ್ಯಕ್ಷರು.—ಮುನಿಸಿಪಾಲಿಟಿ ವಿಷಯ ಅದು.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಸಚಿವರು).—ಗ್ರಾಮಗಳ ಬಗ್ಗೆ ಹೇಳುತ್ತಿದ್ದಾರೆ. ಮಲಪ್ರಭಾ ನದಿಯಿಂದ ಗ್ರಾಮಗಳಿಗೆ ನೀರು ಬಿಡುವ ಯೋಜನೆ ಅದು ಎಂದು ಕಾಣುತ್ತದೆ. ವಿವರವನ್ನು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಅಸಂಗಿ ಗ್ರಾಮದ ಹತ್ತಿರ ಹರಿದುಬರುತ್ತಿರುವ ಮಲಪ್ರಭ ನದಿಯಿಂದ ಗುಳದೇಗುಡ್ಡಕ್ಕೆ ನೀರು ಪೂರೈಕೆಯಾಗುತ್ತದೆ.

ಅಧ್ಯಕ್ಷರು.—ನಿಯಮಾವಳಿ ೭೨ರಲ್ಲಿ ಆಗಿದ್ದರೆ ಪಿಡಾಖಿಂಡಿತವಾಗಿ ಮಂತ್ರಿಗಳು ಉತ್ತರ ಕೊಡಲೇ ಬೇಕಾಗಿತ್ತು. ಆದಕ್ಕೆ ನೀವು ಸಮಯ ಕೊಡುವುದಿಲ್ಲ. ಇವತ್ತೇ ನೋಟಿಸು ಕೊಟ್ಟು ಇವತ್ತೇ ಉತ್ತರ ಬರಬೇಕು ಎಂದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ನಿಯಮ ೭೨ರಲ್ಲಿ ಬರಲಿಲ್ಲ ಎಂದು ನಿಯಮ ೩೩ ರಲ್ಲಿ ಹಾಕಬೇಕಾಗಿ ಬಂತು.

(viii) ತಿಪಟೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ಎಸ್. ಪಿ. ಗಂಗಾಧರಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಮಳೆಯಾಗದೆ ಅಭಾವ ಪರಿಸ್ಥಿತಿ ಉಂಟಾಗಿದ್ದು ಕುಡಿಯುವ ನೀರಿನ ತೊಂದರೆಯಾಗಿ ಜನರು ಸಂಕಷ್ಟಕ್ಕೆ ಈಡಾಗಿರುವುದರಿಂದ ಸರ್ಕಾರದವರು ತಕ್ಷಣ ಕೊಳವೆ ಭಾವಿಗಳನ್ನು ಹಾಕಿಸಿ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕಾಗಿರುವ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಎರಡು ತಿಂಗಳಿಂದ ಕೇಳುತ್ತಿದ್ದರೂ ಇನ್ನು ೧೫ ದಿನ ಬಿಟ್ಟು ಕಳುಹಿಸುತ್ತೇನೆ ಎಂದು ಐದಾರು ಸಲ ಹೇಳಿದ್ದಾರೆ. ಆದರೂ ಯಾರನ್ನೂ ಕಳುಹಿಸಲಿಲ್ಲ. ಆದಷ್ಟು ಜಾಗ್ರತೆ ಕೊಳವೆ ಬಾವಿ ಹಾಕಿಸಿ ಕುಡಿಯುವ ನೀರಿನ ಏರ್ಪಾಡು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮೊನ್ನೆತಾನೆ ಮೂರು ಇಂಚು ಮಳೆಯಾಗಿದೆ.

ಅಧ್ಯಕ್ಷರು.—ಶ್ರೀ ಮಹದೇವ್ ಅವರೆ, ನಿಮ್ಮ ಸೂಚನೆ ಈ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

(ix) ಸಿದ್ದಾಪುರ ತಾಲ್ಲೂಕಿನ ದೊಡ್ಮನೆ ಸಮೀಪದ ಹಳ್ಳಿಯಲ್ಲಿ ಗಣಪ ಅಮ್ಮಗೌಡ ಎನ್ನುವವರ ಮನೆಗೆ ಕೆಲವರು ನುಗ್ಗಿ ಕಳ್ಳತನ ಮತ್ತು ಹಲ್ಲೆ ಮಾಡಿರುವ ಬಗ್ಗೆ

ಶ್ರೀ ಗೋಪಾಲ ಮುಕುಂದ ಕಾನಡೆ.—ದಿನಾಂಕ ೬-೩-೮೪ ರಂದು ಸಿದ್ದಾಪುರ ತಾಲ್ಲೂಕಿನ ದೊಡ್ಮನೆ ಸಮೀಪದ ಹಳ್ಳಿಯಲ್ಲಿ ಗಣಪ ಅಮ್ಮಗೌಡ ಅವರ ಮನೆಗೆ ನುಗ್ಗಿ ಅವರ ಹೆಂಡತಿ ಮಕ್ಕಳಿಗೆಲ್ಲಾ ಹೊಡೆದು ೧೦೦ ಡಬ್ಬು ಬೆಲ್ಲ, ಮೂರು ಚೀಲ ಭತ್ತ, ಮೂರು ಚೀಲ ಅಡಿಕೆ, ಬಂಗಾರ ಇವುಗಳನ್ನೆಲ್ಲಾ ಪೋಲೀಸ್ ಡ್ರೆಸ್‌ನಲ್ಲಿ ತಂದಿದ್ದಾರೆ. ೪೦ ಮಂದಿಯಲ್ಲಿ ಒಬ್ಬರನ್ನು ಬಿಟ್ಟು ಬೇರೆ ಯಾರನ್ನೂ ಬಂಧಿಸಿಲ್ಲ. ಇದರಲ್ಲಿ ರಾಜಕೀಯ ನಡೆಸುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಕಳ್ಳತನ, ದರೋಡೆ ನಡೆದಿದೆ ಎಂದು ಹೇಳಿದ್ದಾರೆ. ಆದರ ಬಗ್ಗೆ ವರದಿ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ನಡೆಸುತ್ತೇವೆ.